# ಮಂಗಳಂ - ಗೋಪ ಗೋಪೀಸುತಗೆ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 637.
2. **Note:** Singer has followed these lyrics.

ರಾಗ: ಸುರುಟಿ ತಾಳ: ಆದಿ

ಮಂಗಳಂ ಜಯ ಮಂಗಳಂ || ಪ ||

ಗೋಪ ಗೋಪೀಸುತಗೆ ಗೋವಳ ರಾಯಗೆ
ಗೋವರ್ಧನೋದ್ಧರ ಗೋವಿಂದಗೆ
ಗೋಕುಲದಲಿ ಹುಟ್ಟಿ ಗೋವುಗಳನೆ ಕಾಯಿದ
ಗೋಪಾಲಕೃಷ್ಣನ ಶ್ರೀಪಾದಕ್ಕೆ || 1 ||

ಭಕ್ತಜನ ಪಾಲಿಪಗೆ ಭವ ರೋಗ ವೈದ್ಯಗೆ
ಅಚ್ಯುತಾನಂತ ಆದಿ ಪುರುಷಗೆ
ಅಖಿಳ ಲೋಕೇಶಗೆ ಅಜನ ಪಡೆದಾತಗೆ
ಕ್ಷೀರ ಸಾಗರ ವಾಸಿ ಲಕ್ಷ್ಮೀಶಗೆ || 2 ||

ಪನ್ನಂಗಶಯನಗೆ ಪಾವನ ಚರಿತ್ರಗೆ
ಸನ್ನುತಾನಂತ ಸದ್ಗುಣ ರಾಶಿಗೆ
ಎನ್ನೊಡೆಯ ಪುರಂದರ ವಿಠಲ ರಾಯಗೆ
ತನ್ನ ನಂಬಿದವರ ಸಲಹುವ ದೇವಗೆ || 3 ||

**Classification:** Keerthane
**Ankita:** purandara vittala
**Location:** NA
**Category:** mangala song, Krishna Stuti, Vishnu Stuti
**Sub-Category:** Krishna, Vishnu, mangala, deva, Vaidya, bhava, roga, achyuta, Ananta, Samudra, halu, Gopala, govinda, gokula, gopi, govu, huttu

**Pravachana:** NA

**Explanation:** NA